# ಉದ್ಯಮ ಚೇತರಿಕೆ ಕುರಿತ ಸಮಾವೇಶ ಇಂದು

**ಬೆಂಗಳೂರು:** ಸಿಎಂಆರ್ ವಿಶ್ವವಿದ್ಯಾಲಯದ ಸ್ಕೂಲ್ ಆಫ್ ಮ್ಯಾನೇಜ್ಮೆಂಟ್ ವತಿಯಿಂದ ಶುಕ್ರವಾರ (ಸೆ.17) ಆನ್‌ಲೈನ್ 'ಉದ್ಯಮದ ಪ್ರಸ್ತುತ ಸನ್ನಿವೇಶ ಮತ್ತು ಸಮಕಾಲೀನ ರೂಢಿಗಳು' ಎಂಬ ವಿಚಾರದ ಕುರಿತು ಆನ್‌ಲೈನ್ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಕೊರೊನಾ ಸಾಂಕ್ರಾಮಿಕ ಎಲ್ಲಾ ಕ್ಷೇತ್ರಗಳ ಮೇಲೆ ಪರಿಣಾಮ ಬೀರಿದ್ದು, ವ್ಯಾಪಾರ ವಲಯಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಇದರಿಂದ ಹೊರಬರಲು ಬಹುತೇಕ ಕಂಪನಿಗಳು ಕಾರ್ಯಕ್ಷಮತೆಯನ್ನು ಬಲಪಡಿಸುವುದು, ಉತ್ಪಾದಕತೆಯನ್ನು ಸುಧಾರಿಸುವುದು, ಗ್ರಾಹಕರನ್ನು ಆಕರ್ಷಿಸುವುದು ಮತ್ತು ಗ್ರಾಹಕರನ್ನು ಉಳಿಸಿಕೊಳ್ಳುವತ್ತ ಮುಂದಾಗಿವೆ. ಆನ್‌ಲೈನ್ ಉದ್ಯಮದತ್ತ ಹೆಚ್ಚಿನ ಆದ್ಯತೆ ನೀಡಿವೆ. ಈ ನಿಟ್ಟಿನಲ್ಲಿ ಯುವ ಉದ್ಯಮಿಗಳು, ಉದ್ಯೋಗಿಗಳು, ಸ್ಟಾರ್ಟ್‌ಅಪ್‌ಗಳಿಗೆ ಆನ್‌ಲೈನ್ ವಿಚಾರಗೋಷ್ಠಿ ನೆರವಾಗಲಿದೆ. ಬೆಳಿಗ್ಗೆ 9.45 ರಿಂದ ಸಂಜೆ 4 ಗಂಟೆವರೆಗೂ ಗೋಷ್ಠಿಗಳು ನಡೆಯಲಿದ್ದು, ಉದ್ಯಮಿಗಳು, ಸಂಸ್ಥೆ ವ್ಯವಸ್ಥಾಪಕರು, ಶಿಕ್ಷಣ ತಜ್ಞರು ಮತ್ತು ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ. ಕೊರೊನಾ ಸಂಕಷ್ಟದಿಂದ ಸಂಸ್ಥೆಗಳನ್ನು ಹೊರತರುವ ಕುರಿತು ಮಾಹಿತಿ ಮತ್ತು ಅನುಭವಗಳನ್ನು ಹಂಚಿಕೊಳ್ಳಲಿದ್ದಾರೆ.

ಪ್ರಮುಖ ಉದ್ಯಮಿಗಳಾದ ಬಿಗ್ ಬಾಸ್ಕೆಟ್ ಡಾಟ್ ಕಾಮ್ ಸಿಒಒ ಸಿಟಿ ಕೆ ಬಾಲಕುಮಾರ್, ವೆಸ್ಟರ್ನ್ ಡಿಜಿಟಲ್ ಮಾರ್ಕೆಟಿಂಗ್ ನಿರ್ದೇಶಕ ಸಿ. ಜಗನಾಥನ್, ಐಐಎಂ ಬೆಂಗಳೂರು ಸಿಎಚ್‌ಆರ್‌ಒ ಶಿವಕುಮಾರ್ ವೆಂಕಟೇಶ್ವರನ್ ತಮ್ಮ ವಿಚಾರಗಳನ್ನು ಮಂಡಿಸಲಿದ್ದಾರೆ ಎಂದು ಸಿಎಂಆರ್ ವಿಶ್ವವಿದ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ. ಕಾರ್ಯಕ್ರಮದಲ್ಲಿ ಭಾಗಿಯಾಗಲು https://forms.gle/VWrbGkWun1HDKKMQ7 ವೆಬ್‌ಸೈಟ್‌ಗೆ ಭೇಟಿ ನೀಡಬಹುದು.